


# ವಿನಾಯಕ ಮತ್ತು ಅನಲಾಸುರ

ಕಥೆ: ವಿವೇಕಾನಂದದಾಸ
ಚಿತ್ರ: ಶಂಕರ್

ನಾವೆಲ್ಲಾ ವಿನಾಯಕನನ್ನು ಗರಿಕೆ ಹುಲ್ಲಿನಿಂದ ಪೂಜಿಸುತ್ತೇವೆ. ಈ ಪದ್ಧತಿ ಹೇಗೆ ಆರಂಭವಾಯಿತೆಂಬುದನ್ನು ಈ ಕಥೆ ತಿಳಿಸುತ್ತದೆ.




ವಿನಾಯಕ ಅನಲಾಸುರನೊಡನೆ ಯುದ್ಧ ಮಾಡಿ ಅವನನ್ನು ಕೊಲ್ಲಲು ತೀರ್ಮಾನಿಸಿದ. ಅಂತೆಯೇ ಒಂದು ದೊಡ್ಡ ಸೈನ್ಯದೊಡನೆ ಹೊರಟ. ಅನಲಾಸುರ ತನ್ನ ಬಾಯಿಂದ ಬೆಂಕಿ ಉಗುಳಿ, ತನ್ನ ಮನಸ್ಸಿಗೆ ಬಂದವರನ್ನೆಲ್ಲ ಕೊಲ್ಲುವ ವರ ಪಡೆದಿದ್ದ. ಹಾಗಾಗಿ ಅವನು ವಿನಾಯಕನ ಸೈನ್ಯವನ್ನೆಲ್ಲಾ ಸುಟ್ಟು ಭಸ್ಮ ಮಾಡಿದ. ವಿನಾಯಕನಿಗೆ ಅತ್ಯಂತ ಕೋಪವುಂಟಾಯಿತು.
6
ವಿನಾಯಕನಿಗೂ ಅನಲಾಸುರನಿಗೂ ಘೋರ ಯುದ್ಧ ನಡೆಯಿತು. ಕೊನೆಗೆ ವಿನಾಯಕನು ಅವನನ್ನು ತನ್ನ ಸೊಂಡಲಿನಿಂದ ಹಿಡಿದು ನುಂಗಿಬಿಟ್ಟ.
7
ಅವನ ಹೊಟ್ಟೆಯನ್ನು ಸೇರಿದ ಅನಲಾಸುರ ಅಲ್ಲಿ ಸುಮ್ಮನಿರಲಿಲ್ಲ. ಒಳಗಿನಿಂದಲೇ ಅವನು ವಿನಾಯಕನನ್ನು ಸುಡಲಾರಂಭಿಸಿದ. ವಿನಾಯಕನಿಗೆ ಅದನ್ನು ತಡೆದುಕೊಳ್ಳಲಾಗಲಿಲ್ಲ.
8
ಹೋ! ಉರಿ! ಉರಿ ನನ್ನನ್ನು ಸುಡುತ್ತಿದೆ.
ದೇವತೆಗಳೆಲ್ಲಾ ಒಟ್ಟಿಗೆ ಸೇರಿದರು. ವಿನಾಯಕನ ಸ್ಥಿತಿಯನ್ನು ನೋಡಿ ತುಂಬಾ ಗಾಬರಿಗೊಂಡರು.
9
ಅನಲಾಸುರನು ವಿನಾಯಕನನ್ನೂ ಸುಟ್ಟು ಭಸ್ಮ ಮಾಡುವಂತಿದೆ. ಈಗೇನು ಮಾಡೋಣ?
ವಿನಾಯಕನ ಮೇಲೆ ಗಂಗೆಯ ನೀರನ್ನು ಸುರಿಯೋಣ. ಅದು ಬೆಂಕಿಯನ್ನು ಶಾಂತಗೊಳಿಸಬಹುದು.
ಸರಿ, ಹಾಗೇ ಮಾಡೋಣ.



ದೇವತೆಗಳು ವಿನಾಯಕನ ಮೇಲೆ ನೀರು ಸುರಿಯುತ್ತಾ ಹೋದರು. ಆದರೆ ಉರಿ ಹೆಚ್ಚುತ್ತಲೇ ಹೋಯಿತು.
10
ಅವನ ತಲೆಯ ಮೇಲೆ ದೊಡ್ಡ ದೊಡ್ಡ ಮಂಜಿನ ಗೆಡ್ಡೆಯನ್ನಿಟ್ಟರು. ಆದರೂ ಅಗ್ನಿ ಶಾಂತವಾಗಲಿಲ್ಲ.
11
ಅವನನ್ನು ತಣ್ಣಗಾಗಿಸಲು ಚಂದ್ರನನ್ನು ಪ್ರಾರ್ಥಿಸಿದರು. ಆದರೆ ಅವನ ಬೆಳದಿಂಗಳೂ, ಅಗ್ನಿಯನ್ನು ಶಾಂತಗೊಳಿಸಲಿಲ್ಲ.
12
ಅಯ್ಯೋ! ನಿಮ್ಮ ಯತ್ನಗಳೆಲ್ಲಾ ನನ್ನ ಉರಿಯನ್ನು ಇನ್ನೂ ಹೆಚ್ಚಿಸುತ್ತಲೇ ಇದೆ.
13
ಆಗ ಅಲ್ಲಿಗೆ ಒಬ್ಬ ಋಷಿ ಬಂದು ಒಂದು ಹಿಡಿ ಗರಿಕೆ ಹುಲ್ಲನ್ನು ಮಂತ್ರಿಸಿ ಅವನ ತಲೆಯ ಮೇಲಿಟ್ಟ.
ಅಬ್ಬಾ, ನನ್ನ ಉರಿಯೆಲ್ಲಾ ಹೋಯಿತು. ಅನಲಾಸುರನೂ ನನ್ನ ಹೊಟ್ಟೆಯಲ್ಲಿ ಜೀರ್ಣವಾಗಿ ಹೋದ.
14
ವಿನಾಯಕನ ಸಂತೋಷಕ್ಕೆ ಪಾರವೇ ಇಲ್ಲ.
ಇಂದಿನಿಂದ ಯಾರು ನನ್ನನ್ನು ಗರಿಕೆಯ ಹುಲ್ಲಿನಿಂದ ಪೂಜಿಸುವರೋ, ಅವರ ಅಪೇಕ್ಷೆಗಳನ್ನೆಲ್ಲಾ ಈಡೇರಿಸುತ್ತೇನೆ.
15
ಅಂದಿನಿಂದ ವಿನಾಯಕನನ್ನು ಗರಿಕೆಯಿಂದ ಪೂಜಿಸುವ ಪದ್ಧತಿ ಶುರುವಾಯಿತು.